# ಗಾಂಧಿನಗರ ಪೋಸ್ಟ್

## ಇನ್ನು ಗ್ಯಾರಂಟಿ...



ಸುಮಾರು ಮೂರು ದಶಕಗಳ ಹಿಂದೆ ತೆರೆ ಕಂಡ 'ನಂಜುಂಡಿ ಕಲ್ಯಾಣ' ರಾಘವೇಂದ್ರ ರಾಜ್‌ಕುಮಾರ್ ವೃತ್ತಿಬದುಕಿನ ಅತ್ಯಂತ ಯಶಸ್ವಿ ಚಿತ್ರ. ಆ ಚಿತ್ರದ ಹೆಸರಿನ ಹೊಸ ಕಥನ ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಏಪ್ರಿಲ್ 6ರಂದು ತೆರೆಗೆ). ರಾಜೇಂದ್ರ ಕಾರಂತ್ ಚಿತ್ರದ ನಿರ್ದೇಶಕರು.

'ಇನ್ನು ಗ್ಯಾರಂಟಿ ನಂಜುಂಡಿ ಕಲ್ಯಾಣ' ಎನ್ನುವ ಹಳೆಯ ಚಿತ್ರದ ಹಾಡು ಕಾರಂತರ ನಿರೀಕ್ಷೆಗೂ ಅನ್ವಯಿಸುವಂತಿದೆ. ಯುಎಫ್ಓ, ಕ್ಯೂಬ್ ಗೊಂದಲದಲ್ಲಿ ಮುಂದಕ್ಕೆ ಹೋಗುತ್ತಲೇ ಬಂದ ಚಿತ್ರದ ಬಿಡುಗಡೆಗೆ ಕೊನೆಗೂ ಮುಹೂರ್ತ ಕೂಡಿಬಂದಿದೆ. ಈ ಗೊಂದಲದ ಜೊತೆಗೆ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಕೂಡ ತಮ್ಮ ಚಿತ್ರದ ಬಿಡುಗಡೆಗೆ ಸಂಬಂಧಿಸಿದಂತೆ ನ್ಯಾಯ ಸಿಕ್ಕಿಲ್ಲ ಎನ್ನುವ ಅಳಲು ಅವರಿಗಿದೆ.

ಗರ್ವಿಷ್ಟ ಹೆಣ್ಣಿಗೆ ಬುದ್ಧಿ ಕಲಿಸುವುದು ಹಳೆಯ ಚಿತ್ರದ ಕಥೆಯಾದರೆ, ತಾನು ಪ್ರೀತಿಸಿದ ಹುಡುಗಿಗಾಗಿ ಅವಳ ಹಟಮಾರಿ ತಾಯಿಯ ಪಾಲಿಗೆ ರಿಂಗ್ ಮಾಸ್ಟರ್ ಆಗುವ ನಾಯಕನ ಕಥೆ ಹೊಸ ಚಿತ್ರದಲ್ಲಿದೆ. ಎರಡೂ ಚಿತ್ರಗಳ ಹೂರಣ ಹಾಸ್ಯವೇ. ಕಾರಂತರಿಗಂತೂ ತಮ್ಮ ಕಲ್ಯಾಣ ಪ್ರೇಕ್ಷಕರನ್ನು ನಕ್ಕುನಗಿಸುವ ಕುರಿತು ಯಾವ ಅನುಮಾನವೂ ಉಳಿದಿಲ್ಲ. ಕಚಗುಳಿ ಮಾತ್ರವಲ್ಲ, ಮೈ ನವಿರೇಳಿಸುವ ದೃಶ್ಯಗಳೂ ಚಿತ್ರದಲ್ಲಿ ಸಾಕಷ್ಟಿವೆಯಂತೆ. ಕೊನೆಯ ಇಪ್ಪತ್ತು ನಿಮಿಷಗಳ ಕ್ಲೈಮ್ಯಾಕ್ಸ್ ದೃಶ್ಯವಂತೂ ಪ್ರೇಕ್ಷಕರನ್ನು ರಂಜಿಸುವುದರ ಜೊತೆಗೆ, ಭಾವನಾತ್ಮಕವಾಗಿ ಕೂಡ ಕಾಡಲಿದೆಯಂತೆ.

ತನುಷ್ ಶಿವಣ್ಣ ಹಾಗೂ ಶ್ರಾವ್ಯಾ ಚಿತ್ರದ ನಾಯಕನಾಯಕಿ. ಚಿತ್ರದ ನಿರ್ಮಾಪಕರೂ ಆಗಿರುವುದರಿಂದ ತನುಷ್ ನಿಜವಾದ ಅರ್ಥದಲ್ಲಿ ಸಿನಿಮಾದ ಹೀರೊ. 'ಮಡಮಕ್ಕಿ' ಚಿತ್ರದಲ್ಲಿ ಚಿತ್ರರಸಿಕರ ಗಮನಸೆಳೆದಿದ್ದ ಅವರು, 'ನಂಜುಂಡಿ ಕಲ್ಯಾಣ'ದ ಮೂಲಕ ವೃತ್ತಿಜೀವನದ ತಿರುವಿನ ನಿರೀಕ್ಷೆಯಲ್ಲಿದ್ದಾರೆ. ಸಿನಿಮಾ ಬಿಡುಗಡೆಯ ಬೆನ್ನಿಗೇ, ತನುಷ್ ಹಸೆಮಣೆಯನ್ನೂ ಏರುತ್ತಿದ್ದಾರೆ. ಏ. 20ರಂದು ಅವರ ನಿಜಜೀವನದಲ್ಲಿ ಗಟ್ಟಿಮೇಳ ಮೊಳಗಲಿದೆ.



## ಯೋಗಿಯ ಲವ್ ಸ್ಟೋರಿ!

ಎರಡು ಪ್ರೇಮಕಥೆ, ಇಂದು ಸಿನಿಮಾ – ಇದು ಚಿತ್ರೀಕರಣ ನಡೆಸುತ್ತಿರುವ 'ಯೋಗಿ ಲವ್ಸ್ ಸುಪ್ರಿಯಾ' ಚಿತ್ರದ ಕಥೆ. ನಾಯಕ ಯೋಗಿ ಚಿತ್ರದ ನಿರ್ದೇಶಕರೂ ಹೌದು.

ಕಣ್ಸನ್ನೆಯಿಂದಲೇ ಪ್ರೇಕ್ಷಕರನ್ನು ಮರುಳುಮಾಡಿರುವ ಮಲಯಾಳಿ ಹುಡುಗಿ ಪ್ರಿಯಾ ವಾರಿಯರ್ ಈ ಚಿತ್ರದಲ್ಲಿ ನಟಿಸಬೇಕಿತ್ತು. ಆದರೆ, ಯೋಗಿ ಅವರ ಯೋಗದಲ್ಲಿ ಪ್ರಿಯಾ ಜೊತೆ ನಟಿಸುವ ಅವಕಾಶ ಸದ್ಯಕ್ಕೆ ಇದ್ದಂತಿಲ್ಲ. ಅವರ ಡೇಟ್ಸ್ ಹೊಂದಾಣಿಕೆಯಾಗದ ಕಾರಣ, ಹೈದರಾಬಾದ್‌ನಿಂದ ನಕ್ಷತ್ರಾ ಎನ್ನುವ ಚೆಲುವೆಯನ್ನು ಅವರು ಕರೆತಂದಿದ್ದಾರೆ. ಆದರೆ, ಸಿನಿಮಾದ ಮುಹೂರ್ತದ ಸಂದರ್ಭದಲ್ಲಿ ಪ್ರಿಯಾ ಕಣ್ಣಿನ ಮಿಂಚೂ ಇರಲಿಲ್ಲ, ನಕ್ಷತ್ರಪ್ರಭೆಯೂ ಇರಲಿಲ್ಲ. ಗ್ಲ್ಯಾಮರ್‌ನ ಕೊರತೆಯನ್ನು ತುಂಬಿದ್ದು ನಟಿ ಪ್ರಣೀತಾ.

ಕನ್ನಡದ ಹುಡುಗಿ ಪ್ರಣೀತಾ ತೆಲುಗು ಚಿತ್ರಗಳಲ್ಲಿ ಹೆಚ್ಚು ಅವಕಾಶ ಗಳಿಸಿಕೊಂಡಿರುವವರು. ಅತಿಥಿಯಾಗಿ ಭಾಗವಹಿಸಿದ್ದ ಅವರು, ಚಿತ್ರತಂಡಕ್ಕೆ ಶುಭ ಹಾರೈಸಿದರು.

ನಾಯಕ–ನಿರ್ದೇಶಕ ಯೋಗಿ ಸಹಾಯಕ ನಿರ್ದೇಶಕನಾಗಿ ಅನುಭವ ಗಳಿಸಿದ್ದಾರೆ. ತಮ್ಮ ಅನುಭವವನ್ನೆಲ್ಲ ಪ್ರೇಮಕಥೆಯ ಮೇಲೆ ಧಾರೆಯೆರೆದಿರುವ ಅವರು, ನಾಯಕ–ನಿರ್ದೇಶಕ ಎರಡು ಪಾತ್ರಗಳಲ್ಲೂ ಯಶಸ್ಸು ಕಾಣುವ ಹಂಬಲದಲ್ಲಿದ್ದಾರೆ. ತಾರಾ, ರಂಗಾಯಣ ರಘು ಮುಖ್ಯಪಾತ್ರಗಳಲ್ಲಿ ನಟಿಸುತ್ತಿದ್ದು, ರಾಜಶೇಖರ್ ಛಾಯಾಗ್ರಹಣ ಹಾಗೂ ವೀರಸಮರ್ಥ ಸಂಗೀತ ಚಿತ್ರಕ್ಕಿದೆ.